



ಮಹಾಭಾರತದೊಳಗಿಂದ ಒಂದಿಷ್ಟು

■ ಹಾಡುಪಾಡು ರಾಮು
ಕಲೆ: ಎಚ್.ಎಸ್. ಮೋನಪ್ಪ

# ಭರತನ ಹುಟ್ಟು ಹೆಸರಾಯ್ತು ಭಾರತ



ಕರೆಸಿಕೋತೀನಿ ಅಂತ ಮಾತು ಕೊಟ್ಟು ದುಷ್ಯಂತ ಹೊರಟು ಹೋದ. ಇವಳ ಬಸಿರಲ್ಲಿ ರಾಜನ ಮಗ ಬೆಳೀತಾ ಇದ್ದ. ಆ ಬಿಕ್ಕಟ್ಟಿನಲ್ಲಿ ರಾತ್ರೀ ಹಗಲೂ ನಿದ್ದೆಯಿಲ್ಲದೆ, ಸ್ನಾನ ಅನ್ನ ನೀರು ಬಿಟ್ಟು ರಾಜನನ್ನೇ ನೆನೀತಿದ್ದಳು ಶಕುಂತಳೆ.

'ಆನೆ ಕುದುರೆ ರಥ ಕಾಲಾಳು ಸಮೇತ ಬ್ರಾಹ್ಮಣರನ್ನು ಕಳಿಸುತಾನೆ, ಅವರು ಬಂದು ಇವತ್ತು, ತಪ್ಪಿದರೆ ನಾಳೆ, ಇಲ್ಲ ನಾಳಿದ್ದರಲ್ಲಿ ಖಂಡಿತ ಕರಕೊಂಡು ಹೋಗತಾರೆ' ಅಂದುಕೋತಾ ದಿನ ಆಯಿತು, ಪಕ್ಷ ಆಯಿತು, ತಿಂಗಳುಗಳೂ ಆಗಿ ಸೂರ್ಯ ಆ ಮೂಲೆಯಿಂದ ಈ ಮೂಲೆಗೆ ಬಂದ.

ಹೀಗೇ ಲೆಕ್ಕ ಹಾಕತಾ ಆ ಬಿಕ್ಕಟ್ಟಿನ ಪ್ರಯಾಸದ ಮೂರು ದಿನ ತಳ್ಳುವುದೂ ದುಗುಡದಲಿ ವಾರಗಳೆನಿಸುತ್ತ ದಿನ ತುಂಬಿ ಅದು ಮೂರು ವರ್ಷಗಳಾಯ್ತೇನೋ ಎಂತೆನಿಸಿ–

ದಿನ ತುಂಬಿದ ಆ ಚಂದದ ತೊಡೆಯವಳು
ಬಸಿರಿನಿಂದ ಮಗನನ್ನು ಭೂಮಿಗೆ ಇತ್ತಳು
ಉರೀತಿರೋ ಬೆಂಕಿಯ ಹಾಗೆ ಬೆಳಗುತಿತ್ತು ಮಗು
ರೂಪ ಸ್ವಭಾವ ಎಲ್ಲ ಅಪ್ಪ ದುಷ್ಯಂತನ ಥರವೇ

ಕಣ್ವ ಪುಣ್ಯದ ಕೆಲಸ ಮಾಡೋದರಲ್ಲಿ ಎತ್ತಿದ ಕೈ. ಜಾತಕರ್ಮಾನೆಲ್ಲಾ ಮಾಡಿಸಿ ಮಗೂನ ಬಲಿಷ್ಠನಾಗೋ ಹಾಗೆ ಬೆಳೆಸಿದ. ಚೂಪಾಗಿರೋ ಬಿಳೀ ಹಲ್ಲು, ಸಿಂಹದ ಹಾಗೆ ಮಜಬೂತು ಮೈಯಿ, ಕೈಯಲ್ಲಿ ಚಕ್ರದ ಗುರುತು. ದೊಡ್ಡ ನೆತ್ತಿ. ಮನುಷ್ಯರ ಬಸಿರಲ್ಲಿ ಬಂದದ್ದಲ್ಲ ಅನ್ನೋ ಹಾಗೆ ಬೆಳೀತು ಆ ಶಿಶು.

ಮಡದೀ ಮಗೂನ ಕರಕೊಂಡು ಹೋಗೋಕೆ ದುಷ್ಯಂತ ಯಾರನ್ನೂ ಕಳಿಸಲೇ ಇಲ್ಲ.

ಇವಳು ಅದರ ಚಿಂತೇಲೇ ಮುಳುಗಿ ಬಿಳಿಚಿಕೋತಾ ಕೂದಲು ತೆಳ್ಳಗಾಗತಾ, ಬಟ್ಟೆ ಕೊಳಕಾಗತಾ, ಸಂಕಟದಲ್ಲೇ ಬಡಕಲಾಗಿಬಿಟ್ಟಳು.

ಅವಳನ್ನ ನೋಡತಾ ಕಣ್ವ ಮಗೂಗೆ ವೇದ ಶಾಸ್ತ್ರ ಎಲ್ಲ ಕಲಿಸಿದ. ಮಗು ಮನುಷ್ಯರಿಗೆ ಮೀರಿದ್ದನ್ನೆಲ್ಲ ಮಾಡತಿರೋದು ಕಂಡು, ಇದು ತಕ್ಕನಾದ ಕಾಲ, ಇನ್ನು ಇವನನ್ನ ಯುವರಾಜ ಅಂತ ಆಗಿಸಿ ಬಿಡಬೇಕು ಅಂತ ತೀರ್ಮಾನ ಮಾಡಿಕೊಂಡು ಶಿಷ್ಯರನ್ನು ಕರೆದು,

'ಬೇಗ, ಇವತ್ತೇ, ಅವಳ ಮಗನ ಜೊತೆ ಶಕುಂತಲೇನ ಗಂಡನ ಮನೆಗೆ ತಲಪಿಸಿ. ತವರಲ್ಲಿ ಹೆಣ್ಣು ತುಂಬಾ ದಿನ ಉಳೀಕೂಡದು. ಹೆಸರು ಕೆಡತ್ತೆ, ನಡತೆಯೂ ಕೆಡತ್ತೆ, ಧರ್ಮವೂ ಕೆಡತ್ತೆ. ಬೇಗ ಬಿಟ್ಟು ಬನ್ನಿ' – ಅಂದ.

ಕಶ್ಯಪನ ಮಗ ಹೇಳಿದ್ದು ಧರ್ಮವೇ ಕೊಂಡಾಡೋ ಮಾತು. ಕಣ್ವ ಒಪ್ಪಿಗೆ ಕೊಟ್ಟ ಅಂತ ಶಕುಂತಲೆಗೆ ಹಿಗ್ಗೋ ಹಿಗ್ಗು.

ಕಣ್ವ ಹೊರಡಿ ಅಂದದ್ದಕ್ಕೆ ಪುರುವಿನ ಮೊಮ್ಮಗ ಸು 'ಆಯಿತು ತಾತ' ಅಂತು. 'ಅಮ್ಮಾ, ಯಾಕೆ ತಡ ಮಾಡತಿದೀಯಾ. ರಾಜನ ಮನೆಗೆ ಹೋಗಣ' ಅನ್ನುತ್ತಾ ಮುನಿಯ ಕಾಲಿಗೆ ಬಿದ್ದ ಹೊರಡೋಕೆ.

ಶಕುಂತಲೆ ಕೈ ಜೋಡಿಸಿಕೊಂಡು ಅಪ್ಪನಿಗೆ ಒಂದು ಬಳಸು ಬಂದು ಶರಣು ಮಾಡಿ 'ಅಪ್ಪಾ ತಿಳೀದೇ ಕೆಟ್ಟ ಮಾತಾಡಿದ್ದರೆ, ಸುಳ್ಳಾಡಿದ್ದರೆ, ಮಾಡಬಾರದ್ದು, ನಿನಗೇ ಆಗದ್ದು ಮಾಡಿದ್ದರೆ – ಮರೆತು ಬಿಡು ತಂದೇ' ಅಂದಳು.

ಮುನಿ ತಲೆ ಎತ್ತಲಿಲ್ಲ. ಮಾತು ಹೊರಡಲಿಲ್ಲ. ಕಣ್ವನಿಗೂ ಮನುಷ್ಯರ ಥರಾನೇ ಕಣ್ಣೀರು ಬಂದು ಬಿಡತು.

ಕಣ್ವ ಎಲ್ಲಾ ಮುನಿಗಳನ್ನೂ ಕರೆದ. ಬರೀ ನೀರು ಕುಡಿಯೋರು, ಗಾಳಿ ಕುಡಿದೇ ಬದುಕೋರು, ತರಗೆಲೇನೇ ತಿನ್ನೋರು, ಹಣ್ಣು ಗೆಡ್ಡೆ ತಿಂದು ಮನಸು ತಡಕೊಂಡವರು,